**ಸಾಕ್ಷಿಯನ್ನು ಪುನಃ ದಿನಾಂಕ 12.07.2023 ರಂದು ಕರೆಯಿಸಿ ಪ್ರಮಾಣ ಮಾಡಿಸಲಾಯಿತು. ಮುಂದುವರೆದ ಪಾಟೀ ಸವಾಲು ಶ್ರೀ ಎಲ್ ಎಸ್ ಕೆ ವಕೀಲರಿಂದಃ**

ದಿನಾಂಕ 04.09.2021 ರಂದು ನಡೆದ ನಿಮ್ಮ ಮುಖ್ಯ ವಿಚಾರಣೆಯ 3 ನೇ ಸಾಲಿನಿಂದ 5 ನೇ ಪ್ಯಾರಾದ ವರೆಗೆ "2011 ನೇ ಸಾಲಿನಲ್ಲಿ ---------- ನನ್ನ ತಂದೆ ತಾಯಿಯವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ" ಎಂದು ಹೇಳಿರುತ್ತೀರಾ ಸದರಿ ವಿಷಯವನ್ನು ನೀವು ನಿಮ್ಮ ದೂರಿನಲ್ಲಿ ಹೇಳಿರುವುದಿಲ್ಲ ಎಂದು ಸೂಚಿಸಿದಾಗ ಸಾಕ್ಷಿಯು ನಾನು ಪೋಲಿಸ್ ಠಾಣೆಯಲ್ಲಿ ದೂರನ್ನು ಕೊಡುವಾಗ ಸಂಕ್ಷಿಪ್ತವಾಗಿ ದೂರನ್ನು ಕೊಡಲು ಹೇಳಿದರು ಅದ್ದರಿಂದ ಮುಖ್ಯ ವಿಚಾರಣೆಯಲ್ಲಿ ಈಗ ಓದಿದ ವಿಷಯವನ್ನು ಸಂಪೂರ್ಣವಾಗಿ ಹೇಳಿರುವುದಿಲ್ಲ, ಪೋಲಿಸರು ನನಗೆ ಸಂಪೂರ್ಣ ವಿವರವನ್ನು ನ್ಯಾಯಾಲಯದಲ್ಲಿ ಹೇಳುವಂತೆ ಹೇಳಿದ್ದರಿಂದ ಮುಖ್ಯ ವಿಚಾರಣೆಯಲ್ಲಿ ನಾನು ಎಲ್ಲಾ ವಿವರವನ್ನು ಹೇಳಿರುತ್ತೇನೆ ಎಂದು ನುಡಿದರು. ಸಾಕ್ಷಿಯು ಮಂದುವರೆದು ಮುಖ್ಯ ವಿಚಾರಣೆಯಲ್ಲಿ ಹೇಳಿದ ಸದರಿ ವಿಷಯವನ್ನು ನಾನು ದೂರಿನಲ್ಲಿ ಹೇಳಿರುತ್ತೇನೆ ಎಂದು ನುಡಿದರು.

27.10.2021 ರ ಮುಖ್ಯ ವಿಚಾರಣೆಯಲ್ಲಿ ಹೇಳಿರುವ 5 ನೇ ಆರೋಪಿಯಿಂದ ------- 1 ನೇ ಆರೋಪಿಗೆ ಸಹಾಯ ಮಾಡುತ್ತಿದ್ದರು ಎಂಬುವ ಭಾಗವನ್ನು ಸಾಕ್ಷಿಗೆ ಓದಿ ಹೇಳಿ ಸದರಿ ವಿಷಯವನ್ನು ನೀವು ನಿಮ್ಮ ದೂರಿನಲ್ಲಿ ಹೇಳಿರುವುದಿಲ್ಲ ಎಂದು ಸೂಚಿಸಿದಾಗ, ಸಾಕ್ಷಿಯು ಮೊದಲ 4 ಲೈನನ್ನು ದೂರಿನಲ್ಲಿ ನಾನು ವಿವರವಾಗಿ ಹೇಳಿರುವುದಿಲ್ಲ. 4 ನೇ ಆರೋಪಿಯಿಂದ ------- ನನಗೆ ಹೇಳುತ್ತಾ ಇದ್ದರು ಎಂಬುವ ಭಾಗವನ್ನು ಸಾಕ್ಷಿಗೆ ಓದಿ ಹೇಳಿ ಸದರಿ ವಿಷಯವನ್ನು ನೀವು ನಿಮ್ಮ ದೂರಿನಲ್ಲಿ ಹೇಳಿರುವುದಿಲ್ಲ ಎಂದು ಸೂಚಿಸಿದಾಗ, ಸಾಕ್ಷಿಯು ದೂರಿನಲ್ಲಿ ಹೇಳಿದ್ದೇನೆ.

ಅದಾಗ್ಯೂ ಕೂಡ 4 ನೇ ಆರೋಪಿಯು ------ ಲಘುವಾಗಿ ತೆಗೆದುಕೊಂಡಿರುತ್ತಾರೆ ಎಂಬುವ ಭಾಗವನ್ನು ಸಾಕ್ಷಿಗೆ ಓದಿ ಹೇಳಿ ಸದರಿ ವಿಷಯವನ್ನು ನೀವು ನಿಮ್ಮ ದೂರಿನಲ್ಲಿ ಹೇಳಿರುವುದಿಲ್ಲ ಎಂದು ಸೂಚಿಸಿದಾಗ, ಸಾಕ್ಷಿಯು ನಾನು ನನ್ನ ಮುಖ್ಯ ವಿಚಾರಣೆ ಸಮಯದಲ್ಲಿ ತಿಳಿಸಿ ಲಘುವಾಗಿ ತೆಗೆದುಕೊಂಡಿರುತ್ತಾರೆ ಎಂದು ಹೇಳಿರುತ್ತೇನೆ ಆದರೆ ಟೈಪ್

ಮಾಡುವ ಸಮಯದಲ್ಲಿ ನ್ಯಾಯಾಲಯವು ಅದನ್ನು "ತಿಳಿಸದೇ" ಎಂದು ತಪ್ಪಾಗಿ ತೆಗೆದುಕೊಂಡಿರುತ್ತಾರೆ.

ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯವನ್ನು ನೀವು ದೂರಿನಲ್ಲಿ ಹೇಳಿರುವುದಿಲ್ಲ ಎಂದು ಸೂಚಿಸಿದಾಗ ಸಾಕ್ಷಿಯು ಕೆಲವು ವಿಷಯಗಳು ದೂರಿನಲ್ಲಿ ಹೇಳಿರುವುದಿಲ್ಲ, ಕೆಲವು ವಿಷಯಗಳನ್ನು ದೂರಿನಲ್ಲಿ ಹೇಳಿದ್ದೇನೆ ಎಂದು ನುಡಿದರು. ನಾನು ದೂರಿನಲ್ಲಿ ಸಂಕ್ಷಿಪ್ತವಾಗಿ ಹೇಳಿರುತ್ತೇನೆ, ವಿವರವಾಗಿ ನ್ಯಾಯಾಲಯದಲ್ಲಿ ಹೇಳಿದ್ದೇನೆ. ನಿಮ್ಮ ಮುಖ್ಯವಿಚಾರಣೆಯಲ್ಲಿ ಹೇಳಿರುವ ಘಟನೆಗಳು ನಡೆದಿರುವುದಿಲ್ಲ, ಅವುಗಳನ್ನು ಸೃಷ್ಟಿ ಮಾಡಿ ಹೇಳಿರುತ್ತೀರಾ ಎಂದು ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ, ಆದರೆ ನಾನು ಈಗ ಹೇಳಿದ ಹಾಗೆ ಮುಖ್ಯ ವಿಚಾರಣೆಯಲ್ಲಿ ತಿಳಿಸಿ ಎಂಬುವ ಬದಲು ತಿಳಿಸದೇ ಎಂದು ತಪ್ಪಾಗಿ ಟೈಪ್ ಮಾಡಿಕೊಂಡಿರುತ್ತಾರೆ. ಆರೋಪಿಗಳು ಯಾರೂ ನಿಮಗೆ ನಿಂದಿಸಿರುವುದಿಲ್ಲ, ಬೈಯ್ದಿರುವುದಿಲ್ಲ, ಯಾವುದೇ ರೀತಿಯ ತೊಂದರೆಯನ್ನು ಕೊಟ್ಟಿರುವುದಿಲ್ಲ, 1 ನೇ ಆರೋಪಿ ಯಾವುದೇ ರೀತಿಯ ಲೈಂಗಿಕ ಕಿರುಕುಳ ನಿಮಗೆ ಕೊಟ್ಟಿರುವುದಿಲ್ಲ ಎಂದು ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದರು. ನೀವೇ 1 ನೇ ಆರೋಪಿಯ ಜೊತೆ ಗಂಟೆ ಗಟ್ಟಲೇ ಮೊಬೈಲ್ ಮುಖಾಂತರ ಮಾತನಾಡಿ, ನಿಮ್ಮ ಮನೆಯವರಿಗೆ ಒಪ್ಪಿಸಿ, ನನ್ನನ್ನು ಮದುವೆ ಮಾಡಿಕೋ ಎಂದು 1 ನೇ ಆರೋಪಿಗೆ ನೀವು ಹೇಳಿ, ಒತ್ತಾಯ ಮಾಡಿ, 1 ನೇ ಆರೋಪಿ ಮತ್ತು ಬೇರೆ ಆರೋಪಿಗಳು ಒಪ್ಪದೇ ಇದ್ದಾಗ, ಈ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷ ನುಡಿಯುತ್ತಿದ್ದೀರಾ ಎಂದು ಸೂಚಿಸಿದಾಗ, ಸಾಕ್ಷಿಯು ಸರಿಯಲ್ಲ ಎಂದು ನುಡಿದರು.

ಪಂಚನಾಮೆಗೆ ಸಾಕ್ಷಿಯಾಗಿ ಕರೆದು ಪೋಲಿಸರು ನಿಮಗೆ ನೋಟಿಸನ್ನು ಜಾರಿ ಮಾಡಿದ್ದಾರಾ ಎಂದು ಕೇಳಿದಾಗ ಜಾರಿ ಮಾಡಿರುವ ಬಗ್ಗೆ ನೆನಪಿರುವುದಿಲ್ಲ, ಆದರೆ ಮನೆ ಹತ್ತಿರ ಬಂದು ಪಂಚನಾಮೆ ಜರುಗಿಸಿರುತ್ತಾರೆ ಎಂದು ನುಡಿದರು. ಎಸ್ ಐ ನಂಜೇಗೌಡ ಅವರು ಪಂಚನಾಮೆ ಜರುಗಿಸಿರುತ್ತಾರೆ. ಪಂಚನಾಮೆಯನ್ನು ಎಸ್ ಐ ನಂಜೇಗೌಡ ರವರು ಬರೆದಿರುತ್ತಾರೆ. ಸಾಕ್ಷಿಯು ಮುಂದುವರೆದು 3-4 ಜನ ಪುಸ್ತಕದಲ್ಲಿ ಬರೆಯುತ್ತಿದ್ದರು, ಯಾರು ಬರೆದರು ಎಂದು ನೆನಪಿರುವುದಿಲ್ಲ ಎಂದು ನುಡಿದರು. ನಿಮ್ಮ ಮನೆಯ ಹತ್ತಿರ ಬಂದು ಪೋಲಿಸರು ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ನೀವು ಪಂಚನಾಮೆಗೆ ಸಹಿ ಹಾಕಿರುವುದಿಲ್ಲ, ಠಾಣೆಯಲ್ಲಿ ಸೃಷ್ಟಿ ಮಾಡಿದ ಪಂಚನಾಮೆಗೆ ಠಾಣೆಯಲ್ಲಿಯೇ ಸಹಿ

ಮಾಡಿರುತ್ತೀರಾ ಎಂದು ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದರು. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದರು.

**ಮರು ವಿಚಾರಣೆ** ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ. ಹೇ. ಕೇ. ಸ. ಇ. ಎ. ಒ.

6 ನೇ ಅ ಮು ಮ ದಂ ನ್ಯಾ